**ದಿಃ 17.08.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ- ಎದುರುದಾರರ ಪರ ಶ್ರೀ.ಕೆ.ಎಸ್.ಆರ್ ವಕೀಲರಿಂದಃ**

1. 8 ವರ್ಷಗಳ ನಂತರ ನಾನು ಈ ಅಪೀಲನ್ನು ಸಲ್ಲಿಸಿದ್ದೇನೆ ಎನ್ನುವುದು ಸರಿ. LAC 78/2002 ರಲ್ಲಿ ನ್ಯಾಯಾಲಯ ನೀಡಿದ್ದ ಪರಿಹಾರ ಸಮಾಧಾನಕರವಾಗಿದ್ದರಿಂದ, ಈ 8 ವರ್ಷಗಳ ಅವಧಿಯಲ್ಲಿ ಈ ಅಪೀಲನ್ನು ಸಲ್ಲಿಸಿರಲಿಲ್ಲ ಎನ್ನುವುದು ಸರಿ. ಅಂದಿನ ಎಸ್.ಆರ್. ವ್ಯಾಲ್ಯೂ ಮತ್ತು ಇಂದಿನ ಎಸ್.ಆರ್.ವ್ಯಾಲ್ಯೂ ಬೇರೆ ಬೇರೆಯಾಗಿದ್ದರಿಂದ ಈ ಬಗ್ಗೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ ಎಂದು ಮಾಡಿದ ಸಲಹೆಗೆ ಸಾಕ್ಷಿ 'ಉತ್ತರಿಸಿರುವುದಿಲ್ಲ.' LAC 78/2002 ರಿಂದ LAC 90/2002 ರವರೆಗಿನ ಪ್ರಕರಣವನ್ನು ನಡೆಸಿದ ನಮ್ಮ ವಕೀಲರ ಹೆಸರು ಬಿ.ಎಂ.ಪ್ರಕಾಶ್ ಎಂದು. LAC 78/2002 ರಲ್ಲಿ ಆದಂತಹ ಆದೇಶದ ಮೇಲೆ ಈವರೆಗೆ ನಾನು ಜಾರಿ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನೀವು ಅಮಲ್ ಜಾರಿ ಅರ್ಜಿ 465/2012 ರನ್ನು ಈಗಾಗಲೇ ಸಲ್ಲಿಸಿ ಹಣವನ್ನು ಪಡೆದಿರುತ್ತೀರಿ ಎಂದು ಮಾಡಿದ ಸಲಹೆಗೆ ಸಾಕ್ಷಿ ಉತ್ತರಿಸಿರುವುದಿಲ್ಲ. ಆ ಜಾರಿ ಅರ್ಜಿಯಲ್ಲಿಯೂ ನನ್ನ ವಕೀಲರು ಬಿ.ಎಂ.ಪ್ರಕಾಶ್ ರವರೇ. ಆ ಜಾರಿ ಅರ್ಜಿಯ ಬಗ್ಗೆ ನನ್ನ ಈ ಅಪೀಲಿನಲ್ಲಿ ಹಾಜರಾಗಿರುವ ವಕೀಲರಿಗೆ ಮಾಹಿತಿಯನ್ನು ನೀಡಿರುವುದಿಲ್ಲ. ಆ ಜಾರಿ ಅರ್ಜಿಯ ಆದೇಶದ ಹಾಳೆಯ ನಕಲನ್ನು ಉದ್ದೇಶ ಪೂರ್ವಕವಾಗಿ ಈ ನ್ಯಾಯಾಲಯದಲ್ಲಿ ಹಾಜರು ಪಡಿಸಿರುವುದಿಲ್ಲ ಎಂದು ಮಾಡಿದ ಸಲಹೆಗೆ ಸಾಕ್ಷಿ 'ಹಾಕಿಲ್ಲ' ಎಂದು ನುಡಿಯುತ್ತಾರೆ. ಆ ಜಾರಿ ಅರ್ಜಿಯ ಮುಂದಿನ ದಿನಾಂಕ ದಿಃ03.09.2022 ಎಂದು ಮಾಡಿದ ಸಲಹೆಗೆ ಸಾಕ್ಷಿ 'ಉತ್ತರಿಸಿರುವುದಿಲ್ಲ.' LAC 78/2002 ಬಡ್ಡಿಯನ್ನು ನೋಟಿಫಿಕೇಶನ್ ದಿನಾಂಕದಿಂದ ಕೊಟ್ಟಿರುತ್ತಾರೆ ಎಂದು ಎದುರುದಾರರು ಆರ್.ಪಿ.ನಂಬರ್ 193/2019 ಸಲ್ಲಿಸಿರುತ್ತಾರೆ ಎಂದು ಮಾಡಿದ ಸಲಹೆಗೆ ಸಾಕ್ಷಿ 'ಉತ್ತರಿಸಿರುವುದಿಲ್ಲ.' ಆ ಅರ್ಜಿಯನ್ನು ನಡೆಸಲು ನಾನು ವಕೀಲರನ್ನು ನೇಮಿಸಿರುವುದಿಲ್ಲ. ಆರ್.ಪಿ.ನಂಬರ್ 193/2019 ನ್ನು ಬಹಳ ತಡವಾಗಿ ಸಲ್ಲಿಸಲಾಗಿದೆ ಎನ್ನುವ ಕಾರಣದಿಂದ ವಜಾ ಮಾಡಲಾಗಿದೆ ಎನ್ನುವ ವಿಷಯ ನನಗೆ ಗೊತ್ತಿಲ್ಲ.

2. ಅಮಲ್ ಜಾರಿ ಅರ್ಜಿ 465/2012 ರನ್ನು ಸಲ್ಲಿಸಿ ಪರಿಹಾರದ ಹಣವನ್ನು ಕಾಲ ಕಾಲಕ್ಕೆ ಪಡೆದುಕೊಂಡಿದ್ದೇನೆ ಎನ್ನುವುದು ಸರಿ. ಈ ಅಪೀಲನ್ನು ಸಲ್ಲಿಸಿರುವ ಬಾಬ್ತು ಅಮಲ್ ಜಾರಿ ಅರ್ಜಿ

465/2012 ರಲ್ಲಿ ತಿಳಿಸಿರುವುದಿಲ್ಲ. ಈ ನ್ಯಾಯಾಲಯದಿಂದ ಆದೇಶವನ್ನು ಪಡೆದು ಪುನಃ ಅಮಲ್ ಜಾರಿ ಅರ್ಜಿಯನ್ನು ಸಲ್ಲಿಸುವ ಉದ್ದೇಶದಿಂದ ಈ ಅಪೀಲನ್ನು ಸಲ್ಲಿಸಲಾಗಿದೆ ಎನ್ನುವುದು ಸರಿಯಲ್ಲ.

3. LAC 79/2002 ರಲ್ಲಿ ಯಾವಾಗ ಆದೇಶವಾಗಿರುತ್ತದೆ ಎನ್ನುವುದು ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಬದಲಿಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ನಾನು ಹೆಬ್ಬೆಟ್ಟಿನ ಸಹಿಯನ್ನು ಹಾಕಿರುತ್ತೇನೆ. ಈಗಾಗಲೇ LAC 78/2002 ರಲ್ಲಿ ಸೂಕ್ತ ಪರಿಹಾರದ ಹಣವನ್ನು ನೀಡಿದ್ದು, ಅದನ್ನು ನಾನು ಪಡೆಯುತ್ತಿರುವುದರಿಂದ ಈ ಅಪೀಲು ಊರ್ಜಿತವಾಗಿರುವುದಿಲ್ಲ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಮೈಸೂರು.**